**ಕರ್ನಾಟಕ ವಿಧಾನ ಪರಿಷತ್**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1875(2166) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 25-03-2021 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿನ ನಗರ ರಸ್ತೆ ಸಾರಿಗೆ ನಿರ್ದೇಶನಾಲಯ (DULT) ಯಾವಾಗ ಸ್ಥಾಪಿತವಾಯಿತು ಈ ನಿರ್ದೇಶನಾಲಯದ ಕಾರ್ಯಾಚರಣೆಗಳೇನು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: UDD 134 BMR 2006 (1) ದಿನಾಂಕ: 08-03-2007 ರನ್ವಯ ರಾಜ್ಯದಲ್ಲಿ ನಗರ ಭೂ ಸಾರಿಗೆ ನಿರ್ದೇಶನಾಲಯವು ಸ್ಥಾಪನೆಯಾಗಿರುತ್ತದೆ.<br><br>ಈ ನಿರ್ದೇಶನಾಲಯದ ಪ್ರಮುಖ ಕಾರ್ಯಗಳು ಕೆಳಗಿನಂತಿವೆ;<br><br>• ಸಾರ್ವಜನಿಕ ಸಾರಿಗೆ ಬಲವರ್ಧನೆ / ಸಾರ್ವಜನಿಕ ಸಾರಿಗೆ ಕ್ರಮಗಳ ಪಾಲನ್ನು ವೃದ್ಧಿಸುವುದು.<br>• ಸಂಚಾರ ನಿರ್ವಹಣಾ ಸಂಸ್ಥೆಗಳಿಗೆ ತಾಂತ್ರಿಕ ನೆರವನ್ನು ನೀಡುವುದು.<br>• ಮೋಟಾರು-ರಹಿತ ಯೋಜನೆಗಳನ್ನು ಸಿದ್ಧಪಡಿಸುವುದು ಹಾಗೂ ಅವುಗಳ ಅನುಷ್ಠಾನದ ಮೇಲ್ವಿಚಾರಣೆ.<br>• ಪಾದಚಾರಿ ಮಾರ್ಗ / ಮೋಟಾರು-ರಹಿತ ಸಾರಿಗೆ ಸೌಲಭ್ಯಗಳನ್ನು ಜನಪ್ರಿಯಗೊಳಿಸಲು ರಾಜ್ಯ ನಗರ ಸಾರಿಗೆ ನಿಧಿಯಿಂದ ಸಹಾಯಧನ ನೀಡಿಕೆ.<br>• ಸಾರಿಗೆ ಮೂಲ ಸೌಕರ್ಯ ಸೌಲಭ್ಯಗಳ ಮೌಲ್ಯಮಾಪನ ಅಧ್ಯಯನ ನಡೆಸುವುದು<br>• ನಗರ ಸಾರಿಗೆ ವಲಯ / ಶೈಕ್ಷಣಿಕ ಸಂಸ್ಥೆಗಳು / ಸಂಬಂಧಪಟ್ಟ ಸರ್ಕಾರೇತರ ವಿವಿಧ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಸಾರಿಗೆ ವ್ಯವಸ್ಥೆ ಯೋಜನೆಗಳನ್ನು ರೂಪಿಸುವುದು.<br>• ಕಾರ್ಯಾಗಾರಗಳನ್ನು ಆಯೋಜಿಸುವುದರ ಮೂಲಕ ಸಾಮರ್ಥ್ಯ ವರ್ಧನೆ.<br>• ನಗರ ಸಾರಿಗೆ ಸಮಸ್ಯೆಗಳ ಕುರಿತಂತೆ ನೀತಿ ರೂಪಿಸುವಿಕೆ. |
| (ಆ) | ಈ ನಿರ್ದೇಶನಾಲಯ ನೀತಿ-ನಿಯಮಗಳನ್ನು ರೂಪಿಸುತ್ತಿದೆಯೇ ಅಥವಾ ನಗರ ರಸ್ತೆ ಸಾರಿಗೆ ಸಂಬಂಧಿಸಿದಂತೆ, ಯೋಜನೆಗಳ ತಯಾರಿ, ಅನುಷ್ಠಾನ ಮತ್ತು ನಿರ್ವಹಣೆ ಕೆಲಸಗಳನ್ನು ನಿರ್ವಹಿಸುತ್ತಿದೆಯೇ; | ನಗರ ಭೂ ಸಾರಿಗೆ ನಿರ್ದೇಶನಾಲಯವು ನಗರ ಸಾರಿಗೆ ವಿಷಯದಲ್ಲಿ ನೀತಿ - ನಿಯಮಗಳನ್ನು ರೂಪಿಸುತ್ತಿರುವುದರ ಜೊತೆಗೆ ಯೋಜನೆಗಳ ತಯಾರಿ, ಅನುಷ್ಠಾನ, ನಿರ್ವಹಣೆ ಕಾರ್ಯಗಳನ್ನು ಸಹ ವಿವಿಧ ಸಾರ್ವಜನಿಕ ಸಾರಿಗೆ ಸಂಸ್ಥೆಗಳು - ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿದೆ. |
| (ಇ) | ಹಾಗಿದ್ದಲ್ಲಿ, ಈ ನಿರ್ದೇಶನಾಲಯದ ಅಡಿ ಜಿಲ್ಲಾವಾರು ಹಮ್ಮಿಕೊಂಡಿರುವ ಯೋಜನೆಗಳು, ಜಾರಿಯಲ್ಲಿರುವ ಯೋಜನೆಗಳು ಮತ್ತು ಅನುಷ್ಠಾನದ ವಿವರಗಳನ್ನು ಭೌತಿಕ-ಆರ್ಥಿಕ ಗುರಿ ಹಾಗೂ ಸಾಧನೆಗಳನ್ನು ಒಳಗೊಂಡಂತೆ ವಿವರ ನೀಡುವುದು; | ನಿರ್ದೇಶನಾಲಯದ ಕಾರ್ಯಕ್ರಮಗಳನ್ನು HDBRTS ಕಂಪನಿ / K-RIDE / ಸಾರ್ವಜನಿಕ ಸಾರಿಗೆ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.<br><br>ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |

| | | |
|---|---|---|
| (ಈ) | ಈ ನಿರ್ದೇಶನಾಲಯವು ಬೆಂಗಳೂರು ನಗರದಲ್ಲಿ ವಾಹನ ನಿಲುಗಡೆ ನೀತಿ-2 (Parking Policy-2 for Bengaluru) ಜಾರಿಗೊಳಿಸುತ್ತಿದೆಯೇ; ಹಾಗಿದ್ದಲ್ಲಿ, ಈ ವಾಹನ ನಿಲುಗಡೆ ನೀತಿ-2ರ ಪ್ರಮುಖ ಅಂಶಗಳೇನು; ಈ ನೀತಿಯನ್ನು ಅನುಷ್ಠಾನಗೊಳಿಸುವ ವ್ಯವಸ್ಥೆ ಯಾವುದು ಹಾಗೂ ಈ ವ್ಯವಸ್ಥೆಯಲ್ಲಿ ಇದುವರೆಗೂ ಸಂಗ್ರಹಿಸಿದ ವಾಹನ ನಿಲುಗಡೆ ಶುಲ್ಕವೆಷ್ಟು ಹಾಗೂ ಪಾರ್ಕಿಂಗ್‌ನಿಯಮ ಉಲ್ಲಂಘನೆಗೆ ವಿಧಿಸುವ ದಂಡವೆಷ್ಟು; (ಸಂಪೂರ್ಣ ವಿವರ ನೀಡುವುದು) | ನಗರ ಭೂಸಾರಿಗೆ ನಿರ್ದೇಶನಾಲಯವು ಬೆಂಗಳೂರು ನಗರದ ವಾಹನ ನಿಲುಗಡೆ ನೀತಿ-2.0 ಅನ್ನು ತಯಾರಿಸಿದ್ದು, ಇದನ್ನು ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ನಅಇ 208 ಪಿಆರ್‌ಜೆ 2020, ದಿನಾಂಕ: 02-02-2021ರನ್ವಯ ಅನುಮೋದಿಸಿರುತ್ತದೆ. ವಾಹನ ನಿಲುಗಡೆ ನೀತಿ-2.0ರ ಪ್ರಮುಖ ಅಂಶಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.<br><br>ಪಾರ್ಕಿಂಗ್ ನೀತಿ 2.0 ರಡಿಯಲ್ಲಿ ನಿಗಧಿಪಡಿಸಲಾಗಿರುವ ಶುಲ್ಕದ ವಿವರಗಳನ್ನು (Extract copy) **ಅನುಬಂಧ-3**ರಲ್ಲಿ ನೀಡಲಾಗಿದೆ.<br><br>ಸರ್ಕಾರದ ಆದೇಶದನ್ವಯ ಪಾರ್ಕಿಂಗ್ ನೀತಿ-2.0 ನ್ನು ಬೃಹತ್‌ಬೆಂಗಳೂರು ಮಹಾನಗರಪಾಲಿಕೆಯು ಅನುಷ್ಠಾನಗೊಳಿಸಲಿದೆ. |
| (ಉ) | ಹೊಸದಾಗಿ ರೂಪಿತವಾಗಿರುವ ಪಾರ್ಕಿಂಗ್‌ನೀತಿಯನ್ನು ರಾಜ್ಯದ ಇತರ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ವಿಸ್ತರಿಸಲು ಸರ್ಕಾರ ಆಲೋಚಿಸಿದೆಯೇ? (ವಿವರ ನೀಡುವುದು) | ಹೌದು. ಮೈಸೂರು ಹಾಗೂ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಪಾರ್ಕಿಂಗ್ ನೀತಿಯನ್ನು ರೂಪಿಸಲು ಉದ್ದೇಶಿಸಿದೆ. ನಂತರ ಇತರೆ ಟೈರ್-2 ನಗರಗಳಲ್ಲಿ ಕೈಗೊಳ್ಳಲಾಗುವುದು. |

ಸಂಖ್ಯೆ: ನಅಇ 95 ಪಿಆರ್‌ಜೆ_2021

(ಬಿ.ಎಸ್. ಯಡಿಯೂರಪ್ಪ)
ಸನ್ಮಾನ್ಯ ಮುಖ್ಯಮಂತ್ರಿಗಳು

**ಅನುಬಂಧ-1**

A) ನಗರ ಭೂ ಸಾರಿಗೆ ನಿರ್ದೇಶನಾಲಯದಿಂದ ವಿವಿಧ ಯೋಜನೆ/ಕಾರ್ಯಕ್ರಮಗಳ ಪ್ರಗತಿ ವಿವರ

| ಕ್ರ. ಸ. | ಲೆಕ್ಕ ಶೀರ್ಷಿಕೆ | 2020-21 | | (ರೂ. ಕೋಟಿಗಳಲ್ಲಿ) |
|---|---|---|---|---|
| | | ಆರ್ಥಿಕ | | ಭೌತಿಕ |
| | | ಪರಿಷ್ಕೃತ ಆಯವ್ಯಯ | ವೆಚ್ಚ | |
| 1. | ರಾಜ್ಯ ನಗರ ಸಾರಿಗೆ ನಿಧಿ 4217-60-800-6-01 | 30.00 | 30.00 | ರಾಜ್ಯದ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಅಳವಡಿಸಲು, ನಗರಗಳಲ್ಲಿ ಸಾರಿಗೆ ಮೂಲ ಸೌಕರ್ಯಗಳ ನಿರ್ಮಾಣ ಮಾಡಲು ಸಹಾಯಾನುದಾನವನ್ನು ಸಾರಿಗೆ ಸಂಸ್ಥೆಗಳು/ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದೆ. ಪ್ರಸ್ತುತ 2020-21ನೇ ಸಾಲಿನಲ್ಲಿ 43 ಮುಂದುವರೆದ ಯೋಜನೆಗಳು ಪ್ರಗತಿಯಲ್ಲಿರುತ್ತವೆ, 13 ಹೊಸ ಯೋಜನೆಗಳಿಗೆ ಸಹಾಯಾನುದಾನ ಮಂಜೂರಾತಿಯಾಗಿದ್ದು ಮತ್ತು 14 ಯೋಜನೆಗಳು ಪೂರ್ಣಗೊಂಡಿರುತ್ತವೆ. 10 ವರ್ಷದ ಅವಧಿಯಲ್ಲಿ ಸೃಜಿಸಲಾದ ಮೂಲ ಸೌಕರ್ಯ, ಸ್ವತ್ತುಗಳು ಹಾಗೂ ಅನುದಾನದ ವಿವರಗಳನ್ನು ಅನುಬಂಧ-1 C Table ನಲ್ಲಿ ನೀಡಲಾಗಿದೆ. |
| 2. | ರಾಜ್ಯ ನಗರ ಸಾರಿಗೆ ನಿಧಿ 2217-05-800-0-06 | 1.00 | 1.00 | ಈ ಕಾರ್ಯಕ್ರಮದಡಿ ನಗರ ಸಾರಿಗೆ ಯೋಜನೆಗಳ ಅಭಿವೃದ್ಧಿ/ಅಧ್ಯಯನ/ತಾಂತ್ರಿಕ ವಿನ್ಯಾಸ ರಚನೆಯನ್ನು ಸಮಾಲೋಚಕರಿಂದ ಬಳಸಿಕೊಳ್ಳಲಾಗುತ್ತಿದೆ. |
| 3. | ಹುಬ್ಬಳ್ಳಿ-ಧಾರವಾಡ ತ್ವರಿತ ಬಸ್ ಸಂಚಾರ ಯೋಜನೆ 4217-60-800-0-01 | 20.00 (ಪೂರಕ ಅಂದಾಜು) | 20.00 | ತ್ವರಿತ ಬಸ್ ಸಾರಿಗೆ ವ್ಯವಸ್ಥೆಯು ಹುಬ್ಬಳ್ಳಿ-ಧಾರವಾಡ ನಗರದಲ್ಲಿರುವ ಸಾರ್ವಜನಿಕ ಮೀಸಲು ಸಾರಿಗೆ ವ್ಯವಸ್ಥೆಯಾಗಿದೆ. ತ್ವರಿತ ಬಸ್ ಸಾರಿಗೆ ಕಾರಿಡಾರ್ ಉದ್ದ 22.25 ಕಿ.ಮೀ ಇದ್ದು, ಈ ಕಾರಿಡಾರ್ ವ್ಯವಸ್ಥೆಯಲ್ಲಿ ಬಿಆರ್‌ಟಿಎಸ್ ಬಸ್ಸುಗಳನ್ನು ಹೊರತುಪಡಿಸಿ, ಬೇರಾವುದೇ ಬಸ್ ಓಡಾಡಲು ಅನುಮತಿ ಇರುವುದಿಲ್ಲ. ಬಿಆರ್‌ಟಿಎಸ್ ಬಸ್ ಕಾರ್ಯಾಚರಣೆಯನ್ನು ಪ್ರಾಯೋಗಿಕವಾಗಿ ಅಕ್ಟೋಬರ್ 2018ರಿಂದ ಆರಂಭಿಸಲಾಗಿರುತ್ತದೆ. ಇದು ಹುಬ್ಬಳ್ಳಿ – ಧಾರವಾಡ ನಡುವೆ ಸಂಚರಿಸುವ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿರುತ್ತದೆ. ಈ ಮಾರ್ಗದಲ್ಲಿ ಒಟ್ಟು 100 ಬಸ್‌ಗಳ ಸಂಚಾರವನ್ನು ಕಾರ್ಯಾಚರಣೆಗೆ ತರಲಾಗಿದ್ದು, ಇದು 3-4 ನಿಮಿಷಗಳಿಗೊಂದು ಬಸ್ ಆವರ್ತನದಂತೆ ಜಾರಿಗೆ ತರಲಾಗಿದೆ. ಸಧ್ಯಕ್ಕೆ ಪ್ರತಿದಿನ ಸುಮಾರು 85,000 ಪ್ರಯಾಣಿಕರು ಈ ಮಾರ್ಗದಲ್ಲಿ ಪ್ರಯಾಣಿಸುತ್ತಿದ್ದಾರೆ. ಈ ಯೋಜನೆಯ ಒಟ್ಟು ಪರಿಷ್ಕೃತ ವೆಚ್ಚ 970.87 ಕೋಟಿಗಳಾಗಿದ್ದು, ಅಗತ್ಯವಿರುವ ಹೆಚ್ಚುವರಿ ಅನುದಾನ ರೂ. 41.87 ಕೋಟಿ ರೂಪಾಯಿಗಳ ಪೈಕಿ ಪ್ರಸಕ್ತ ಸಾಲಿನ ಪೂರಕ ಆಯವ್ಯಯದಲ್ಲಿ ಒದಗಿಸಲು ಪ್ರಸ್ತಾವಿಸಿದೆ. |

| | | | | |
|---|---|---|---|---|
| **4.** | ಹೆಚ್.ಡಿ.ಬಿ.ಆರ್.ಟಿ.ಎಸ್ ಕಾರ್ಯಾಚರಣೆ ನಗದು ನಷ್ಟ ಪರಿಹಾರ 2217-05-800-0-14 | 35.00 | 35.00 | ಇದು ಹೆಚ್.ಡಿ.ಬಿ.ಆರ್.ಟಿ.ಎಸ್ ಬಸ್ ಕಾರ್ಯಾಚರಣೆಯ ನಗದು ನಷ್ಟ ಪರಿಹಾರವಾಗಿ ಹಣವನ್ನು ವಿನಿಯೋಗಿಸಲಾಗಿದೆ. |
| **5.** | ಸಾರ್ವಜನಿಕ ಬೈಸಿಕಲ್ ಬಳಕೆ ವ್ಯವಸ್ಥೆ 4217-60-800-0-03 | 0.00 | 0.00 | ಬೆಂಗಳೂರು ಸಾರ್ವಜನಿಕ ಬೈಸಿಕಲ್ ಹಂಚಿಕೆ ವ್ಯವಸ್ಥೆಯು ಡಾಕ್‌ಲೆಸ್ ಮಾದರಿಯನ್ನು ಹೊಂದಿದ್ದು, ಬಹು ಖಾಸಗಿ ನಿರ್ವಾಹಕರುಗಳು ನಗರದ ವಿವಿಧ ಭಾಗಗಳಲ್ಲಿ ಬೈಸಿಕಲ್ ಹಂಚಿಕೆ ಸೇವೆಯನ್ನು ಒದಗಿಸಿಕೊಡಲಿದ್ದಾರೆ. ಪ್ರಸಕ್ತ ಸಾರ್ವಜನಿಕರಿಗೆ 2300 ಸೈಕಲ್‌ಗಳ ಸೇವೆಯನ್ನು ಲಭ್ಯಗೊಳಿಸಲಾಗಿದೆ. ಈ ವ್ಯವಸ್ಥೆಯಡಿ ಮೂಲಸೌಕರ್ಯಗಳಾದ ಸೈಕಲ್ ಪಥ, ಹಬ್‌ಗಳನ್ನು ನಿರ್ಮಿಸಲಾಗುವುದು. |
| **6.** | ಬೆಂಗಳೂರು ಉಪನಗರ ರೈಲು ಸ್ಥಾಪನೆ4217-60-800-0-04 | 300.00 | 300.00 | ಬೆಂಗಳೂರು ಉಪನಗರ ರೈಲು ಯೋಜನೆಗೆ ಅನುಷ್ಠಾನವನ್ನು ಒಟ್ಟು ಮುಕ್ತಾಯ ಅಂದಾಜು ವೆಚ್ಚ ರೂ. 15,767 ಕೋಟಿಗಳಲ್ಲಿ, ರೋಲಿಂಗ್ ಸ್ಟಾಕ್ ಖರೀದಿ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಖಾಸಗಿ ಸಾರ್ವಜನಿಕ ಸಹಭಾಗಿತ್ವದ (PPP) ಕ್ರಮವನ್ನು ಅಳವಡಿಸಿಕೊಂಡು ಅನುಷ್ಠಾನಕ್ಕೆ ತರಲು ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ. ಈ ಯೋಜನೆಯನ್ನು ಆರು ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ರಾಜ್ಯದ ರೈಲು ಮೂಲಸೌಕರ್ಯ ಅಭಿವೃದ್ಧಿ ನಿಗಮ - ಕರ್ನಾಟಕ (K-RIDE) (ರೈಲ್ವೆ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದ ಕಂಪನಿ) ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಬೆಂಗಳೂರು ಉಪನಗರ ನಗರ ರೈಲು ಯೋಜನೆಯಡಿ ಒಟ್ಟು 148.17 ಕಿ.ಮೀ ಮಾರ್ಗವನ್ನು ಮತ್ತು 62 ನಿಲ್ದಾಣಗಳನ್ನು ಹೊಂದಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಭೂಸ್ವಾಧೀನಕ್ಕಾಗಿ ರೂ. 200.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಇದಲ್ಲದೇ, ಟ್ರ್ಯಾಕ್ ದ್ವಿಗುಣಗೊಳಿಸುವ ಕಾಮಗಾರಿಗಳನ್ನು ಬೈಯಪ್ಪನಹಳ್ಳಿ - ಹೊಸೂರು ಮಾರ್ಗ (48 ಕಿ.ಮೀ) ಮತ್ತು ಯಶವಂತಪುರ - ಚನ್ನಸಂದ್ರ (21.7 ಕಿ.ಮೀ) ಕಾರ್ಯಾನುಷ್ಠಾನಗೊಳಿಸಲು ರೂ. 100.00 ಕೋಟಿಗಳನ್ನು ಬಿಡುಗಡೆ ಗೊಳಿಸಲಾಗಿದೆ. |
| | **ಒಟ್ಟು** | **386.00** | **386.00** | |

ಅನುಬಂಧ-1

**B) ನಗರ ಸಾರಿಗೆ ಸಂಬಂಧಿಸಿದ ಯೋಜನಾ ಅಭಿವೃದ್ಧಿ ಕಾರ್ಯಗಳು:**

- ಸಮಗ್ರ ಸಂಚಾರ ಯೋಜನೆ 15 ಟೈರ್-2 ನಗರಗಳಲ್ಲಿ ಸಿದ್ಧಪಡಿಸಲಾಗಿರುತ್ತದೆ.

- ಸಮಗ್ರ ಸಂಚಾರ ಯೋಜನೆ ಬೆಂಗಳೂರು ನಗರಕ್ಕೆ ಸಿದ್ಧಪಡಿಸಿ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ.

- ಬೆಂಗಳೂರು ನಗರಕ್ಕೆ ಟ್ರಾನ್ಸಿಟ್ ಒರಿಯೆಂಟರ್ ಡವಲಪ್‌ಮೆಂಟ್ ನೀತಿಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ.

- ಮೈಸೂರು ನಗರದಲ್ಲಿ ಬೈಸಿಕಲ್ ಹಂಚಿಕೆ ವ್ಯವಸ್ಥೆ ಯೋಜನೆಯನ್ನು ವಿಶ್ವ ಬ್ಯಾಂಕ್ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗಿದ್ದು, ಚಾಲನೆಯಲ್ಲಿರುತ್ತದೆ.

- ಅಸ್ತಿತ್ವದಲ್ಲಿರುವ ಎಲ್ಲಾ ಸಾರಿಗೆ ಸಂಸ್ಥೆಗಳ ಕಾರ್ಯಾಚರಣೆಗಳನ್ನು ಅಂದರೆ ಮಾರ್ಗ ಯೋಜನೆ, ದರ ನಿರ್ಧರಣೆ, ಪರವಾನಿಗೆ ಮುಂತಾದವುಗಳನ್ನು ಬಿ.ಎಂ.ಎಲ್.ಟಿ.ಎ ಪ್ರಾಧಿಕಾರವು ತರ್ಕಬದ್ಧಗೊಳಿಸಿ ಸಾರಿಗೆ ಯೋಜನೆಗಳನ್ನು ಸಂಯೋಜನೆ ಹಾಗೂ ಸಮನ್ವಯ ಗೊಳಿಸುವುದನ್ನು ಖಾತ್ರಿಪಡಿಸುತ್ತದೆ.

- ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್ ಕುರಿತ ಮಾಸ್ಟರ್ ಪ್ಲಾನ್‌ನ್ನು ಸಿದ್ಧಪಡಿಸಲಾಗಿದೆ. ಇದರ ಆಧಾರದ ಮೇಲೆ ಬೆಂಗಳೂರು ನಗರಕ್ಕೆ ಐ.ಟಿ.ಎಸ್ ಯೋಜನಾ ಅನುಷ್ಠಾನವನ್ನು ಜಪಾನ್ ಸರ್ಕಾರದ ನೆರವಿನೊಂದಿಗೆ ಅನುಷ್ಠಾನ ಕೈಗೊಳ್ಳಲಾಗಿದೆ.

- ನಗರ ಭೂ ಸಾರಿಗೆ ನಿರ್ದೇಶನಾಲಯವು 3 ಇಂಟರ್ ಮೋಡಲ್ ಸಾರಿಗೆ ಕೇಂದ್ರಗಳಿಗೆ ವಿನ್ಯಾಸ ರಚನೆ ಹಾಗೂ ಸವಿಸ್ತಾರ ಯೋಜನೆ ತಯಾರಿಸಲು ಸಮಾಲೋಚಕರಿಗೆ ಟೆಂಡರ್ ಮೂಲಕ ವಹಿಸಲಾಗಿರುತ್ತದೆ.

- ಬೆಂಗಳೂರು ಹೊರವರ್ತುಲ ರಸ್ತೆಯಲ್ಲಿ 34 ಕಿ.ಮೀ (ಎರಡು ಬದಿ) ಉದ್ದದ ಬಸ್ ಆದ್ಯತಾ ಲೇನ್‌ಗಳನ್ನು ನಿರ್ಮಿಸಲು ವಿನ್ಯಾಸ ರಚನೆಯನ್ನು ಮಾಡಿರುತ್ತದೆ.

- ಬೆಂಗಳೂರು ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಸ್ವಚ್ಛ ವಾಯು ಸ್ಟ್ರೀಟ್ ಚಟುವಟಿಕೆಯನ್ನು ಕೈಗೊಂಡಿರುತ್ತದೆ.

- 12 ಮೆಟ್ರೊ ನಿಲ್ದಾಣಗಳ ಪ್ರವೇಶಾತಿ ಯೋಜನೆಗಳನ್ನು ನಿರ್ದೇಶನಾಲಯದಿಂದ ಸಿದ್ಧಪಡಿಸಿದೆ.

**C) The following project works in Tier 1, Tier 2 & Tier 3 cities have been financed under SUTF**

| Sl.No. | Work Category | Tier 1 cities | Tier 2 cities | Tier 3 Cities |
|---|---|---|---|---|
| 1. | Bus depot | 1 | 2 | 12 |
| 2. | Bus procurement | 2 | 3 | 13 |
| 3. | Bus Shelter | - | 3 | 1 |
| 4. | Bus Stand/ station | 3 | 4 | 14 |
| 5. | Bus terminal | 3 | 5 | 16 |
| 6. | NMT | 3 | 2 | 2 |
| 7. | Others/ Workshops | 12 | 6 | 4 |
| 8. | Divisional workshop/ tyre rethreading plant | 1 | 1 | 1 |
| 9. | HDBRTS works | | 13 | |
| | **Total** | 25 | 39 | 63 |

Over a period of 10 years, from 2010 – 2020, for the total project cost of Rs. 552.21 Crores, financial assistance of Rs. 379.31 Crores, under SUTF has been released.

Head TETC
DULT

ಅನುಬಂಧ-1

**ನೂತನ ಪಾರ್ಕಿಂಗ್ 2.0 ನೀತಿ ಕುರಿತಾದ ವಿವರಗಳು ಈ ಕೆಳಗಿನಂತಿದೆ**

A. ಬೆಂಗಳೂರು ನಗರಕ್ಕೆ ಸಂಬಂಧಿಸಿದ ನೂತನ ಪಾರ್ಕಿಂಗ್ 2.0 ಕಾರ್ಯನೀತಿಗೆ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ. ನಅಇ 208 ಪಿಆರ್‌ಜೆ 2020, ಬೆಂಗಳೂರು ದಿನಾಂಕ: 02.02.2021ರಲ್ಲಿ ಅನುಮೋದನೆ ನೀಡಿ ಆದೇಶಿಸಿರುತ್ತದೆ. ನೂತನ ಪಾರ್ಕಿಂಗ್ ನೀತಿಯು ಈ ಕೆಳಕಂಡ ಉದ್ದೇಶಗಳನ್ನು ಹೊಂದಿರುತ್ತದೆ.

1) ಅಸ್ತವ್ಯಸ್ತವಾಗಿರುವ ಪಾರ್ಕಿಂಗ್‌ನಿಂದ ಸುಸಂಘಟಿತ ಪಾರ್ಕಿಂಗ್ ವ್ಯವಸ್ಥೆಯತ್ತ ಮುನ್ನಡೆಯುವುದು.
2) ಉಚಿತ ಪಾರ್ಕಿಂಗ್‌ನಿಂದ ಪಾವತಿಸಿದ ಪಾರ್ಕಿಂಗ್‌ನತ್ತ ಮುನ್ನಡೆ
3) ಸರ್ಕಾರಿ ಚಾಲಿತ ಪಾರ್ಕಿಂಗ್ ಪೂರೈಕೆಯಿಂದ ಮಾರುಕಟ್ಟೆ ಚಾಲಿತ ಪಾರ್ಕಿಂಗ್ ಪೂರೈಕೆ ಮತ್ತು ನಿರ್ವಹಣೆಯತ್ತ ಮುನ್ನಡೆ
4) ಪಾರ್ಕಿಂಗ್ ನಿಯಮಗಳ ನಿಷ್ಕ್ರಿಯ ಮತ್ತು ದುರ್ಬಲ ಜಾರಿಗೊಳಿಸುವಿಕೆಯಿಂದ ಪಾರ್ಕಿಂಗ್ ಬೇಡಿಕೆಯ-ಸಕ್ರಿಯ ನಿರ್ವಹಣೆಯತ್ತ ಮುನ್ನಡೆ.

ಈ ಮಾನದಂಡಗಳು ಜಾರಿಗೆ ಬಂದ ನಂತರದಲ್ಲಿ ಹೆಚ್ಚು ಜನ ತಮ್ಮ ಖಾಸಗಿ ವಾಹನಗಳ ಬದಲಾಗಿ ಸಾರ್ವಜನಿಕ ಸಾರಿಗೆಯ ಬಳಕೆಯನ್ನು ಮಾಡಲು ಪ್ರೋತ್ಸಾಹ ದೊರಕಿದಂತಾಗುತ್ತದೆ.

B. ಈ ನೂತನ ಪಾರ್ಕಿಂಗ್ ನೀತಿಯ ಮುಖ್ಯಾಂಶಗಳನ್ನು ಈ ಕೆಳಕಾಣಿಸಿದೆ.

1. ನಡಿಗೆ, ಸೈಕ್ಲಿಂಗ್ ಹಾಗೂ ವಾಹನ ಸಂಚಾರಕ್ಕೆ ಅಡ್ಡಬಾರದಂತೆ ಕ್ರಮಬದ್ಧ ಆನ್-ಸ್ಟ್ರೀಟ್ ಪಾರ್ಕಿಂಗ್. ಬಹುಅಂತಸ್ತಿನ ಪಾರ್ಕಿಂಗ್ ಸೌಲಭ್ಯ ಹಾಗೂ ಮೆಟ್ರೋ/ಉಪನಗರ ನಿಲ್ದಾಣಗಳ ಸುತ್ತಮುತ್ತಲು ಆನ್‌ಸ್ಟ್ರೀಟ್ ಪಾರ್ಕಿಂಗ್ ನಿಷೇಧ.
2. ಪರ್ಮಿಟ್‌ಗಳ ಮೂಲಕ ನಿರ್ಬಂಧಿಸಲಾದ ರೆಸಿಡೆನ್ಷಿಯಲ್ ಆನ್-ಸ್ಟ್ರೀಟ್ ಪಾರ್ಕಿಂಗ್
3. ಆನ್-ಸ್ಟ್ರೀಟ್‌ನಲ್ಲಿ ಬಸ್-ಬೇಗಳ ನಿಗ್ರಹ ಸ್ಥಳ ಹಂಚಿಕೆ, ಪಿಕ್-ಅಪ್/ಡ್ರಾಫ್ -ಆಫ್ ಮತ್ತು ಲೋಡಿಂಗ್/ಅನ್‌ಲೋಡಿಂಗ್‌ಗಳಿಗಾಗಿ ಆದ್ಯತೆ ನೀಡಿದ ನಂತರದಲ್ಲಿ ಅಲ್ಪಾವಧಿ ಪಾರ್ಕಿಂಗ್‌ಗಾಗಿ ಆನ್-ಸ್ಟ್ರೀಟ್ ಪಾರ್ಕಿಂಗ್‌ಗೆ ಅವಕಾಶ ಒದಗಿಸುವುದು.
4. ಪಾರ್ಕಿಂಗ್ ಶುಲ್ಕವನ್ನು, ಸಾರ್ವಜನಿಕ ಪಾರ್ಕಿಂಗ್ ಮೂಲ ದರ ಅಂದರೆ ಸಾರ್ವಜನಿಕ ಸಾರಿಗೆಯಲ್ಲಿ To & fro ಓಡಾಡಲು (ಸರಾಸರಿ 11 ಕಿ.ಮೀ ಒಂದು ಮಾರ್ಗದ ಪ್ರವಾಸ ದೂರ) ನಿಗಧಿಪಡಿಸಿದ ದರಕ್ಕಿಂತ ಹೆಚ್ಚಿರಬೇಕೆಂದು ಮಾನದಂಡಗಳಿವೆ.
5. ಆನ್—ಸ್ಟ್ರೀಟ್ ಪಾರ್ಕಿಂಗ್ ದರ ಶುಲ್ಕವು ಪಾರ್ಕಿಂಗ್ ಮೂಲ ದರದ 1.5 ರಿಂದ 3 ಪಟ್ಟಿಗಿಂತ ಹೆಚ್ಚಾಗಿ ನಿಗದಿಪಡಿಸಲಾಗುವುದು.
6. ದೀರ್ಘಾವಧಿ ಆನ್-ಸ್ಟ್ರೀಟ್ ಪಾರ್ಕಿಂಗ್ ಅನ್ನು ನಿರುತ್ತೇಜನಗೊಳಿಸುವ ಸಲುವಾಗಿ ಆನ್-ಸ್ಟ್ರೀಟ್ ಪಾರ್ಕಿಂಗ್ ಶುಲ್ಕವನ್ನು ಒಂದು ಗಂಟೆಗಿಂತ ಮೀರಿದ ಹೆಚ್ಚಿನ ಅವಧಿಗೆ ದರವನ್ನು ಹೆಚ್ಚಿಸತಕ್ಕದ್ದು.
7. ಪಾರ್ಕಿಂಗ್ ನಿರ್ವಹಣೆ ಮತ್ತು ಜಾರಿಗೆ ತರಲು ತಂತ್ರಜ್ಞಾನ ಬಳಕೆ
8. ಆದಾಯ ಬಳಕೆ – ಸಮರ್ಥನೀಯ ಸಾರಿಗೆಗಳಾದ ನಡಿಗೆ, ಸೈಕ್ಲಿಂಗ್ ಮತ್ತು ಸಾರ್ವಜನಿಕ ಸಾರಿಗೆ ಕ್ರಮಗಳಿಗೆ ಉತ್ತೇಜನ ನೀಡಲು.

9. ಏರಿಯಾ ಪಾರ್ಕಿಂಗ್ ಪ್ಲಾನ್ (APPs)ಗಳನ್ನು ತಯಾರಿಸುವ ಮೂಲಕ ಅನುಷ್ಠಾನ

i. ಮೊದಲ ಬಾರಿಗೆ ನಗರ ಭೂ ಸಾರಿಗೆ ನಿರ್ದೇಶನಾಲಯವು ಬೆಂಗಳೂರು ನಗರದ ಎಲ್ಲಾ ವಲಯಗಳಲ್ಲಿ APPs ಗಳನ್ನು ಸಿದ್ಧಪಡಿಸಲಿದೆ.

ii. ಎಲ್ಲಾ ವಲಯಗಳಲ್ಲಿ APPs ಗಳನ್ನು ಅನುಷ್ಠಾನಗೊಳಿಸಲು ವಲಯ ಕಾರ್ಯಪಡೆ (ZTFs) ಗಳನ್ನು ರಚಿಸುವುದು; ವಲಯ ಕಾರ್ಯಪಡೆಗೆ ಆಯಾಯ ವಲಯದ ಬಿ.ಬಿ.ಎಂ.ಪಿ ಜಂಟಿ ಆಯುಕ್ತರ ನೇತೃತ್ವದಲ್ಲಿ ಹಾಗೂ ವ್ಯಾಪ್ತಿ ಪ್ರದೇಶದ ಆರ್.ಟಿ.ಓ ಗಳು ಮತ್ತು ಸಂಚಾರಿ ಪೊಲೀಸ್ ರವರ ಪ್ರಾತಿನಿಧ್ಯ ಒಳಗೊಂಡಿರತಕ್ಕದ್ದು.

iii. ಪಾರ್ಕಿಂಗ್ ಯೋಜನೆಗಳ ಅನುಷ್ಠಾನತೆ ಉಸ್ತುವಾರಿಗಾಗಿ ಮತ್ತು ಕಾರ್ಯಾಚರಣೆಗೆ ತರಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆ ಹೊಂದಿರುವ ಮತ್ತು ಸದಸ್ಯರುಗಳಾಗಿ ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ (ಕನ್ವೀನರ್); ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ; ಆಯುಕ್ತರು, ಬಿ.ಬಿ.ಎಂ.ಪಿ. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಪೊಲೀಸ್ ಆಯುಕ್ತರು, ಬೆಂಗಳೂರು ಸೇರಿದಂತೆ **ಅಪೆಕ್ಸ್ ಸಮಿತಿ**ಯೊಂದನ್ನು ರಚಿಸುವುದು.

**ಮುಖ್ಯಸ್ಥರು TETC**
ನ.ಭೂ.ಸಾ.ನಿ

Annexure - 3

ANNEXURE-3

Extract copy of the approved Parking Policy 2.0 for Bengaluru

**Methodology to calculate non-residential parking fee:**

26 Base parking fee would be established in each zone based on the cost of public commuting. On-street and off-street parking fee, and residential permit fee for a zone may be calculated as a multiple of the base fee established for that zone as follows.

27 The minimum base parking fee shall may be set at to and fro public transport fare (of BMTC bus) for an 11km trip *(average one-way trip length in Bengaluru)* to incentivize commuters to use public transport.

28 Parking fee for different types of parking facilities could be determined as follows:

| Type of Parking | Car Parking Fee |
|---|---|
| Off-street locations | Base parking fee |
| On-street – Commercial Parking | 1.5 to 3 times (Base parking fee)<br>Depending on location<br>On-street parking fee beyond 1 hour should be increased for busy commercial areas |
| Residential Parking Permit (annual fee)<br>Not for HDCs/Arterial or Sub-Arterial Roads<br>For Ward level Roads only | Small cars < Rs.1000<br>Medium cars Rs.3000/4000<br>MUVs/SUVs Rs.5000 |
| Park-and-Ride fee | 0-6 hours: a suitable multiple of 0.75* Base parking fee<br>6-12 hours: a suitable multiple of 0.75*Base parking fee<br>12-24 hours: a suitable multiple of 0.75*Base parking fee |

Note: The type of on-street parking is determined in the APP

29 No charges shall be levied for parking of bicycles (and pedal assisted electric bicycles) at spaces designated for bicycle parking. Charges for all other vehicles may be determined as per the Passenger Car Equivalent (PCE) factor.

12/3/21

Head of TETC
Directorate of Urban Land Transport
Bangalore.